ಓ.ಎಸ್. ನಂ. 178/2015

ಡಿ.ಡಬ್ಲ್ಯು: 01 (Halappa)

ದಿನಾಂಕ: 06.02.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ – ಶ್ರೀ JKR ವಕೀಲರಿಂದ.

ನನ್ನ ತಂದೆ ತಾಯಿ ಹೆಸರು ಚನ್ನಬಸಪ್ಪ, ಕೆಂಚಮ್ಮ. ಪರಸಪ್ಪ, ನಾನು, ಕಾಳಪ್ಪ, ಗುಬ್ಬಮ್ಮ ಚನ್ನಬಸಪ್ಪ, ಕೆಂಚಮ್ಮರವರಿಗೆ ಜನಿಸಿರುತ್ತೇವೆ. ಪರಸಪ್ಪ ಮೃತಪಟ್ಟು 48 ವರ್ಷ ಆಗಿರುತ್ತದೆ. ಆತನ ಹೆಂಡತಿ ನಾಗಮ್ಮ, ಮಕ್ಕಳು ವಾಘೇಶ, ರೇಣುಕಾ, ನಿರ್ಮಲಾ, ಕೊಟ್ರೇಶ ಎಂದರೆ ಹೌದು. ನನಗೆ 4 ಜನ ಮಕ್ಕಳು ಇದ್ದಾರೆ. ಅವರುಗಳು ಚನ್ನಬಸಪ್ಪ, ಸಿದ್ದಪ್ಪ, ಲಕ್ಷ್ಮೀಪತಿ, ರೇಖಮ್ಮ. ಚನ್ನಬಸಪ್ಪನ ಹೆಂಡತಿಯ ಹೆಸರು ಪ್ರತಿಭಾ. ಪ್ರತಿಭಾ ನನ್ನ ತಂಗಿಯ ಮಗಳು. ನನ್ನ ಮಗಳಾದ ರೇಖಮ್ಮಳ ಗಂಡನ ಹೆಸರು ಕೊಟ್ರೇಶ. ಆತನ ನನ್ನ ತಂಗಿಯ ಮಗ.

ಗುಬ್ಬಮ್ಮಳಿಗೆ 4 ಜನ ಮಕ್ಕಳು. ಅವರುಗಳು ಕೊಟ್ರೇಶ, ಪ್ರತಿಭಾ, ಸಕ್ರಮ್ಮ ಮತ್ತು ರವಿ. ಸಕ್ರಮ್ಮಳ ಗಂಡನ ಹೆಸರು ಬುಳ್ಳಪ್ಪ ಎಂದರೆ ಹೌದು. ಬುಳ್ಳಪ್ಪನ ತಾಯಿಯ ಹೆಸರು ರೇಣುಕಮ್ಮ. ಸದರಿ ರೇಣುಕಮ್ಮಳ ವಿರುದ್ಧ ವಾದಿ ದಾವೆ ಹೂಡಿರುತ್ತಾರೆ ಎಂದರೆ ಹೌದು. ದಾವೆಯನ್ನು ಯಾವ ಉದ್ದೇಶಕ್ಕಾಗಿ ಹೂಡಲಾಗಿದೆ ಎಂದು ನನಗೆ ಗೊತ್ತಿಲ್ಲ. ವಕೀಲರು ಯಾವ ಉದ್ದೇಶಕ್ಕೆ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ದಾವಾ ಆಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ನಾನು ಕುರಿ ವ್ಯಾಪಾರ ಮಾಡಿ ಖರೀದಿ ಮಾಡಿದ ಆಸ್ತಿ ಆಗಿರುತ್ತದೆ. ನಾನು ಖರೀದಿ ಮಾಡಿದ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಅದರ ವಿಸ್ತೀರ್ಣ ಒಂದು ಪ್ರದೇಶದಲ್ಲಿ ಎರಡುವರೆ ಎಕರೆ ಇದೆ. ಇನ್ನೊಂದು ಕಡೆ 2.20 ಎಕರೆ ಇದೆ. ಮತ್ತೊಂದು ಕಡೆ 6 ಎಕರೆ ಚಿಲ್ಲರೆ ಇದೆ.

ವಾದಿ ಒಟ್ಟು ಎಷ್ಟು ಆಸ್ತಿಗಳಿಗೆ ಸಂಬಂಧಪಟ್ಟಂತೆ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿ ಒಟ್ಟು 17 ಆಸ್ತಿಗಳ ಮೇಲೆ ದಾವೆ ಹೂಡಿರುತ್ತಾರೆ ಎಂದರೆ ಇರಬಹುದು. ಐಟಂ ನಂಬರ್ 4-9 ಮತ್ತು 11-14 ರಿಂದ ಬಂದ ಆದಾಯದಿಂದ ಮೇಲೆ ನಾನು ಹೇಳಿದ ಆಸ್ತಿಗಳನ್ನು ನನ್ನ ಹೆಸರಿನಲ್ಲಿ ಖರೀದಿ ಮಾಡಿಲಾಗಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಗಂಡ ಕೆಲಸದ ನಿಮಿತ್ತ ಬೇರೆ ಹೋಗಿರುವ ಕಾರಣ ಒಟ್ಟು ಕುಟುಂಬ ಇಲ್ಲ ಎಂದು ನಾನು ಹೇಳುತ್ತಿದ್ದೇನೆ ಎಂದರೆ ಆತ ಬೇರೆ ಹೋಗಿದ್ದ. ಯಾವ ಇಸವಿ, ದಿನಾಂಕದಂದು ನಾವು ಬೇರೆ ಆಗಿದ್ದೇವು, ಸ್ವತ್ತುಗಳನ್ನು ಸಮನಾಗಿ ಬಾಯಿ ಮಾತಿನ ಮೂಲಕ ಹಂಚಿಕೊಂಡಿದ್ದೇವೆ ಎಂದು ಹೇಳಲು ಬರುವುದಿಲ್ಲ.

ನಾನು ಹೇಳಿದಂತೆ ವಿಭಾಗದಲ್ಲಿ ಯಾವ ಆಸ್ತಿ ಯಾರ ಹೆಸರಿಗೆ ಹೋಗಿತ್ತು ಎಂದರೆ ಹೇಳಲಾಗುವುದಿಲ್ಲ. ಸಾಕ್ಷಿ ಮುಂದುವರೆದು 4 ಎಕರೆಯಲ್ಲಿ ನಾನು ಮತ್ತು ವಾದಿ ಸಮನಾಗಿ ಹಂಚಿಕೊಂಡಿರುತ್ತೇವೆ. ಪರಶುರಾಮಪ್ಪನಿಗೆ

ಓ.ಎಸ್. ನಂ. 178/2015

ಡಿ.ಡಬ್ಲ್ಯೂ: 01 (Halappa)

ಒಂದುವರೆ ಎಕರೆಯಲ್ಲಿ ಮುಕ್ಕಾಲು ಎಕರೆ ನೀಡಿದ್ದು, ನಾನು ಹಾಗೂ ವಾದಿ ಮುಕ್ಕಾಲು ಎಕರೆಯಲ್ಲಿ ಸಮನಾಗಿ ಭಾಗ ಮಾಡಿಕೊಂಡಿರುತ್ತೇವೆ. ಆ ಬಗ್ಗೆ ಯಾವುದೇ ಪಾಲುಪಟ್ಟಿ ಬರೆಸಿರುವುದಿಲ್ಲ. ಆ ಪ್ರಕಾರವಾಗಿ ಪಹಣಿ ಪತ್ರಿಕೆಗಳು ಬದಲಾವಣೆಯಾಗಿರುವ ಬಗ್ಗೆ ನಾನು ನೋಡಿರುವುದಿಲ್ಲ ಹಾಗೂ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಾನು ಹೇಳಿರುವಂತೆ ಪಾಲು ವಿಭಾಗ ಆಗಿದ್ದರೆ, ಪಹಣಿ ಪತ್ರಿಕೆ ಮಾಡಿಸಿಕೊಳ್ಳಲು ಯಾವುದೇ ತಕರಾರು ಇರಲಿಲ್ಲ ಎಂದರೆ ನಾವು ಮಾಡಿಸಿಕೊಂಡಿರುವುದಿಲ್ಲ. ನಾನು ಹೇಳಿರುವಂತೆ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ, ವಾದಿಗೆ ಭಾಗ ಕೊಡಲು ತಪ್ಪಿಸಿಕೊಳ್ಳಲು ಭಾಗ ಆಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನನ್ನ ತಾಯಿಯನ್ನು ಮನೆಯಿಂದ ಹೊರಗೆ ಹಾಕಿರುವುದಿಲ್ಲ, ಅವಳು ನನ್ನ ತಂಗಿಯ ಮನೆಯಲ್ಲಿ ಇದ್ದಳು. ನಾನು ನನ್ನ ತಾಯಿಗೆ ಯಾವುದೇ ಕಿರುಕುಳ ನೀಡಿರುವುದಿಲ್ಲ. ನನ್ನ ತಾಯಿಯನ್ನು ನೋಡಿಕೊಳ್ಳಲು ನನಗೆ ಶಕ್ತಿ ಇತ್ತು ಎಂದರೆ ನನ್ನ ಹೆಂಡತಿ ನನ್ನ ತಾಯಿಯನ್ನು ನೋಡಿಕೊಂಡಿರುವುದಿಲ್ಲ. ನನ್ನ ಹೆಂಡತಿಗೆ ನನ್ನ ತಾಯಿಯನ್ನು ನೋಡಿಕೊ ಎಂದು ಹೇಳಿದರು ಚೆನ್ನಾಗಿ ನೋಡಿಕೊಂಡಿರುವುದಿಲ್ಲ. 3 ನೇ ಪ್ರತಿವಾದಿಯ ಬಳಿ ಎಷ್ಟು ಸಮಯ ನನ್ನ ತಾಯಿ ಉಳಿದುಕೊಂಡಿದ್ದರು ಎಂದರೆ ಅಯ್ಯನಹಳ್ಳಿಯಲ್ಲಿ ಸ್ವಲ್ಪ ದಿನ, 3 ನೇ ಪ್ರತಿವಾದಿಯ ಬಳಿ ಸ್ವಲ್ಪ ದಿನ ವಾಸಿಸುತ್ತಿದ್ದರು. ದಾವಾ ಸಲ್ಲಿಸಿದಾಗ ನನ್ನ ತಾಯಿ ಅಯ್ಯನಹಳ್ಳಿಯಲ್ಲಿ ಇದ್ದಳು. ದಾವೆ ಹೂಡಿದ ನಂತರ 3 ನೇ ಪ್ರತಿವಾದಿಯ ಊರಿಗೆ ನನ್ನ ತಾಯಿ ಹೋಗಿರಲಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.